Vijaya Karnataka, dated 10-03-2022, Page No. 07, State.

ಬೆಳಗಾವಿಯಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಘಟಿಕೋತ್ಸವ ಗುರುವಾರ ನಡೆಯಲಿದೆ. ರಾಜ್ಯದ ನಾನಾ ಭಾಗದ 10 ವಿದ್ಯಾರ್ಥಿಗಳು ತಲಾ 3ಕ್ಕಿಂತಲೂ ಅಧಿಕ ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಅವರಲ್ಲಿ ರಾಯಚೂರಿನ ವಿದ್ಯಾರ್ಥಿನಿ ಬುಶ್ರಾ ಅವರು 16 ಪದಕಗಳೊಂದಿಗೆ ಹೊಸ ದಾಖಲೆ ಬರೆದಿದ್ದಾರೆ. **ಟಾಪ್ 5** ಸಾಧಕರ ಯಶೋಗಾಥೆ ಇಲ್ಲಿವೆ.

# ಬುಶ್ರಾ ಕೊರಳಿಗೆ 16 ಚಿನ್ನದ ಪದಕ

**ವಿಕ ಸುದ್ದಿಲೋಕ** ರಾಯಚೂರು

ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ನಗರದ ಬುಶ್ರಾ ಮತೀನ್ 16 ಚಿನ್ನದ ಪದಕ ಗಳಿಸಿ ಅಪೂರ್ವ ಸಾಧನೆ ಮಾಡಿದ್ದಾರೆ. ಇದರಿಂದ ರಾಯಚೂರು ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದಿದೆ ಎಂಬ ಬೇರು ಬಿಟ್ಟ ನಂಬಿಕೆ ಬುಡಮೇಲಾಗಿದೆ. ಇಲ್ಲಿನ ಯರಮರಸ್‌ನಲ್ಲಿರುವ ಎಸ್.ಎಲ್.ಎನ್. ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದ ಬುಶ್ರಾ ಮತೀನ್ ಅವರು ವಿವಿ ಇತಿಹಾಸದಲ್ಲೇ ಅತೀ ಹೆಚ್ಚು ಪದಕ ಗಳಿಸುವ ಮೂಲಕ ಚಿನ್ನದ ಹುಡುಗಿಯಾಗಿ ಹೊರಹೊಮ್ಮಿದ್ದಾರೆ.



ಬುಶ್ರಾ ಮತೀನ್

ಇಲ್ಲಿಯತನಕ 13 ಬಂಗಾರದ ಪದಕಗಳನ್ನು ಪಡೆದುಕೊಂಡಿದ್ದು ದೊಡ್ಡ ಸಾಧನೆಯಾಗಿತ್ತು. ಇವರ ತಂದೆ ಶೇಖ್ ಜಹೀರುದ್ದೀನ್ ಸಿವಿಲ್ ಎಂಜಿನಿಯರ್ ಆಗಿದ್ದಾರೆ. ತಂದೆಯ ದಾರಿಯನ್ನು ಆಯ್ಕೆ ಮಾಡಿಕೊಂಡಿರುವ ಬುಶ್ರಾ ಇಡೀ ರಾಜ್ಯದ ಗಮನ ಸೆಳೆದು, ಶಹಬ್ಬಾಸ್ ಎಂದೆನಿಸಿಕೊಂಡಿದ್ದಾರೆ. ''ಮೊದಲು ವೈದ್ಯಕೀಯ ಶಿಕ್ಷಣ ಸೇರಬೇಕೆಂಬ ಬಯಕೆಯಿತ್ತು. ಆದರೆ, ಕಂಪ್ಯೂಟರ್ ಸೈನ್ಸ್‌ಗೆ ಸೇರಿಕೊಳ್ಳಲು ನಿರ್ಧರಿಸಿದ್ದೆ. ಅಂತಿಮವಾಗಿ ರಾಯಚೂರಿನಲ್ಲಿಯೇ ಉಳಿಯಲು ಬಯಸಿ ಸಿವಿಲ್ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆದೆ'' ಎಂದು ವಿಕಗೆ ತಿಳಿಸಿದರು.

''ಸಾಮಾನ್ಯವಾಗಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಬಂದಂಥ ಪ್ರಶ್ನೆಗಳನ್ನು ಗಮನಿಸುತ್ತಾರೆ. ಅಲ್ಲಿರುವುದನ್ನು ಓದಿ ಹೆಚ್ಚು ಅಂಕ ಗಳಿಸಬಹುದು ಎಂದು ಭಾವಿಸುತ್ತಾರೆ ಆದರೆ, ಈ ವಿಧಾನ ದೊಡ್ಡ ಸಾಧನೆಗೆ ಒತ್ತಾಸೆ ನೀಡುವುದಿಲ್ಲ. ಪಠ್ಯ ಪುಸ್ತಕವನ್ನು ಓದಿ, ಅರ್ಥೈಸಿಕೊಂಡು ಪರೀಕ್ಷೆ ಎದುರಿಸಿದರೆ ಮಾತ್ರ ಅತ್ಯುತ್ತಮ ಅಂಕಗಳನ್ನು ತೆಗೆದುಕೊಳ್ಳಬಹುದು'' ಎಂದ ಅವರು, ''ಕುಟುಂಬದವರ ಪ್ರೋತ್ಸಾಹ, ಕಾಲೇಜಿನ ಬೋಧಕ ವರ್ಗದ ಬೆಂಬಲದಿಂದ ಎಲ್ಲ ಸೆಮಿಸ್ಟರ್‌ಗಳಲ್ಲಿಯೂ ಉತ್ತಮ ಅಂಕ ಗಳಿಸಲು ಸಾಧ್ಯವಾಯಿತು'' ಎಂದು ತಿಳಿಸಿದರು.

ಕಳೆದ ನವೆಂಬರ್‌ನಿಂದ ಸಿವಿಲ್ ಸರ್ವೀಸ್ ಪರೀಕ್ಷೆಗೆ ಸಿದ್ಧತೆಯಲ್ಲಿರುವ ಬುಶ್ರಾ ಮತೀನ್ ಅವರು, ''ಮಹಿಳೆಯರು ಶಿಕ್ಷಣದಲ್ಲಿ ಸಾಕಷ್ಟು ಸಾಧನೆ ಮಾಡುವತ್ತ ಗಮನಹರಿಸಬೇಕು. ಆ ಮೂಲಕ ಸಮಾಜದಲ್ಲಿ ಪ್ರಗತಿ ಸಾಧಿಸಬೇಕು. ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದವರಿಗೆ ಉತ್ತಮ ಭವಿಷ್ಯವಿದೆ '' ಎಂದು ಹೇಳಿದ ಅವರು, ''ಕಾಲೇಜಿನಲ್ಲಿ ಕ್ಯಾಂಪಸ್ ಸಂದರ್ಶನಕ್ಕೆ ಕರೆಯಿದ್ದರೂ ಅದರ ಬದಲು ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದೇನೆ'' ಎಂದರು.

## ಚಿನ್ನದ ಫಸಲು ತೆಗೆದ ಕೃಷಿಕನ ಪುತ್ರಿ

**ಬಳ್ಳಾರಿ:** ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮ್ಯಾನೇಜ್‌ಮೆಂಟ್‌ನ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ಕಾರೇಕಲ್ ವೀರಾಪುರ ಗ್ರಾಮದ ಎಂ. ಚಂದನ 7 ಚಿನ್ನದ ಪದಕ ಗಳಿಸಿದ್ದಾರೆ. ಇವರ ತಂದೆ ತಿಮ್ಮಾರೆಡ್ಡಿ ಮತ್ತು ತಾಯಿ ತ್ರಿವೇಣಿ ಪಕ್ಕಾ ಕೃಷಿಕರಾಗಿದ್ದಾರೆ. ಎಸ್.ಎಸ್.ಎಲ್‌ಸಿ ಶಿಕ್ಷಣವನ್ನು ಬಳ್ಳಾರಿಯ ನಾಗಪ್ಪ ಬಾಲವಿಹಾರ ಪ್ರೌಢ ಶಾಲೆಯಲ್ಲಿ ಅಭ್ಯಾಸ ಮಾಡಿದ್ದ ಇವರು , ಶೇ.93ರಷ್ಟು ಅಂಕ ಪಡೆದಿದ್ದರು. ಪಿಯುಸಿಯನ್ನು ನಗರದ ಬೆಸ್ಟ್ ಪದವಿ ಪೂರ್ವ ಕಾಲೇಜಿನಲ್ಲಿ ಓದಿದ್ದು, ಶೇ.90ರಷ್ಟು ಅಂಕ ಪಡೆದು ಗಮನಸೆಳೆದಿದ್ದರು. ಸಿಇಟಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7,021ನೇ ರ‍್ಯಾಂಕ್ ಪಡೆದು ಶುಲ್ಕರಹಿತ ಕೋಟಾದಡಿ ನಗರದ ಬಿಐಟಿಎಂ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗಕ್ಕೆ ಪ್ರವೇಶ ಪಡೆದಿದ್ದರು. ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವ ಮೂಲಕ ಒಟ್ಟು 7 ಚಿನ್ನದ ಪದಕಗಳು ಲಭಿಸಿರುವುದು ಸಂತಸ ತಂದಿದೆ. ಈ ರೀತಿಯ ಫಲಿತಾಂಶದ ನಿರೀಕ್ಷೆ ಇರಲಿಲ್ಲ. ತರಗತಿಗಳನ್ನು ಅಂದೇ ಓದಿ ಪೂರ್ಣಗೊಳಿಸುತ್ತಿದ್ದೆ. ಪರೀಕ್ಷೆ ಸಂದರ್ಭದಲ್ಲಿ ಹೆಚ್ಚಿನ ಸಮಯ ಓದಲು ಮೀಸಲಿಡುತ್ತಿದ್ದೆ ಎಂದು ಚಂದನ ಹೇಳಿಕೊಂಡರು.



ಎಂ. ಚಂದನ

## ವಿವೇಕ ಭದ್ರಕಾಳಿಗೆ 7 ಪದಕದ ಅಲಂಕಾರ

**ಬೆಳಗಾವಿ:** ಇಲ್ಲಿನ ಕೆಎಲ್‌ಇ ಸಂಸ್ಥೆಯ ಡಾ. ಎಂ. ಎಸ್. ಶೇಷಗಿರಿ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ವಿವೇಕ್ ಭದ್ರಕಾಳಿ 7 ಸ್ವರ್ಣ ಪದಕ ಗಳಿಸಿದ್ದಾರೆ. ಇವರು ಹತ್ತನೇ ತರಗತಿ ತನಕ ಸರಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ವಿವೇಕ್ ಅವರ ತಂದೆ ನಾಗರಾಜ್ ಭದ್ರಕಾಳಿ ಮತ್ತು ತಾಯಿ ಸವಿತಾ ಇಬ್ಬರೂ ಸರಕಾರಿ ಪ್ರಾಥಮಿಕ ಶಾಲೆ ಶಿಕ್ಷಕರು. ''ಮನೆಯಲ್ಲಿ ಮೊದಲಿಂದಲೂ ಓದುವ ವಾತಾವರಣವಿತ್ತು'', ಎನ್ನುವ ವಿವೇಕ್, ''ಸರಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತಿದ್ದು ನನ್ನ ಓದಿಗೆ ಯಾವುದೇ ರೀತಿಯಲ್ಲಿ ಹಿನ್ನಡೆಯಾಗಲಿಲ್ಲ'', ಎಂದು ಆತ್ಮವಿಶ್ವಾಸದಿಂದ ನುಡಿದರು.



ವಿವೇಕ್ ಭದ್ರಕಾಳಿ

''ಆರಂಭದಿಂದ ಅಂದಿನ ಪಾಠಗಳನ್ನು ಅಂದೇ ಓದಿ ಅರ್ಥ ಮಾಡಿಕೊಳ್ಳುತ್ತಿದ್ದೆ. ಬೇಸಿಕ್ ಕಾನ್ಸೆಪ್ಟ್‌ಗಳನ್ನು ಮೊದಲೇ ಕ್ಲಿಯರ್ ಮಾಡಿಕೊಳ್ಳುವುದು ಎಂಜಿನಿಯರಿಂಗ್ ಕಲಿಕೆಯಲ್ಲಿ ಮಹತ್ವದ್ದು. ಅದನ್ನು ಆಯಾ ದಿನವೇ ಮಾಡಿಕೊಳ್ಳುತ್ತಿದ್ದರಿಂದ ಅಂತಿಮ ಪರೀಕ್ಷೆಯಲ್ಲಿ ಹೆಚ್ಚಿನ ಒತ್ತಡ ಆಗಲಿಲ್ಲ'', ಎಂದರು.

## ಲಾಕ್‌ಡೌನ್‌ನಿಂದ ಹೆಚ್ಚಿನ ಸಾಧನೆ

**ಬೆಂಗಳೂರು:** ಕೋವಿಡ್ ಲಾಕ್‌ಡೌನ್ ಹಲವರಿಗೆ ತೊಂದರೆಯನ್ನುಂಟು ಮಾಡಿತು. ಆದರೆ ನನಗೆ ಮನೆಯಲ್ಲೇ ಕುಳಿತು ಉತ್ತಮವಾಗಿ ಓದಲು ವರದಾನವಾಯಿತು. ಇದರಿಂದ ಎಂಜಿನಿಯರಿಂಗ್‌ನಲ್ಲಿ 7 ಚಿನ್ನದ ಪದಕಗಳನ್ನು ಗಳಿಸಲು ಸಾಧ್ಯವಾಯಿತು,'' ಎಂದು ಸ್ವಾತಿ ದಯಾನಂದ್ ಹೇಳಿದರು. ಅವರು ಈ ಬಾರಿ ವಿಟಿಯುನಲ್ಲಿ ದ್ವಿತೀಯ ಟಾಪರ್. ನಗರದ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 'ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್' ಪದವೀಧರೆಯಾದ ಸ್ವಾತಿ, ಪ್ರಸ್ತುತ ಖಾಸಗಿ ಕಂಪೆನಿಯೊಂದರ ಉದ್ಯೋಗಿಯಾಗಿದ್ದಾರೆ.



ಸ್ವಾತಿ ದಯಾನಂದ್

''ನಮ್ಮ ಅಧ್ಯಾಪಕರು ಆನ್‌ಲೈನ್ ಮೂಲಕ ಉತ್ತಮವಾಗಿ ಬೋಧನೆ ಮಾಡುತ್ತಿದ್ದರು. ಸಮಸ್ಯೆಗಳಿಗೆ ಫೋನ್ ಕರೆ ಮೂಲಕವೂ ಉತ್ತರಿಸುತ್ತಿದ್ದರು. ನನ್ನ ಈ ಸಾಧನೆಯ ಹಿಂದೆ ನಮ್ಮ ಅಧ್ಯಾಪಕರ ಪರಿಶ್ರಮ ಅಪಾರವಾಗಿದೆ,'' ಎಂದು ಶ್ಲಾಘಿಸಿದರು.

## ಪರಿಶ್ರಮದಿಂದ ಚಿನ್ನ ಗಳಿಸಿದೆ ಎಂದ ರಮ್ಯಾ

''ಯಾರೇ ಆಗಲಿ ಸ್ವತಃ ಪರಿಶ್ರಮ ಪಟ್ಟರೆ ಮತ್ತು ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅಭ್ಯಾಸ ಮಾಡಿದರೆ ಉತ್ತಮ ಫಲಿತಾಂಶ ಪಡೆಯಬಹುದು,'' ಎಂದು ಕಂಪ್ಯೂಟರ್ ಸೈನ್ಸ್‌ನಲ್ಲಿ 6 ಚಿನ್ನದ ಪದಕಗಳೊಂದಿಗೆ ವಿಟಿಯುಗೆ 5ನೇ ಟಾಪರ್ ಆಗಿ ಹೊರ ಹೊಮ್ಮಿರುವ ಟಿ.ರಮ್ಯಾ ಹೇಳಿದರು. ನಗರದ ಕುಂದಲಹಳ್ಳಿಯಲ್ಲಿರುವ ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವಿದ್ಯಾರ್ಥಿಯಾದ ಟಿ.ರಮ್ಯಾ, ಈಗ ಎಂಎನ್‌ಸಿಯೊಂದರ ಉದ್ಯೋಗಿಯಾಗಿದ್ದಾರೆ.



ಟಿ. ರಮ್ಯಾ

''ಕೋವಿಡ್ ಲಾಕ್‌ಡೌನ್‌ನಿಂದಾಗಿ ಪ್ರಾರಂಭಿಸಿದ ಆನ್‌ಲೈನ್ ಪಾಠಗಳು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಆದ್ದರಿಂದ ನಾನೇ ಸ್ವತಃ ಪುಸ್ತಕಗಳನ್ನು ಶ್ರದ್ಧೆಯಿಂದ ಓದಿ, ಅರ್ಥ ಮಾಡಿಕೊಂಡು ಮತ್ತು ನೋಟ್ಸ್ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದೆ. ಹೀಗಾಗಿ ಆರು ಚಿನ್ನದ ಪದಕ ಗಳಿಸಿದೆ. ಇದಕ್ಕೆ ಹತ್ತಾರು ಮಂದಿ ಒತ್ತಾಸೆ ನೀಡಿದರು ,'' ಎಂದರು.